# ಸಿವಿಲ್ ನ್ಯಾಯಾಧೀಶರ ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಬೇಲೂರು

**ಉಪಸ್ಥಿತರು**

ಶ್ರೀ ನಾಗೇಶ ಸಿ., ಬಿ.ಎ.ಎಲ್, ಎಲ್.ಎಲ್.ಬಿ.,
ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.
ಬೇಲೂರು.

ದಿನಾಂಕ 17ನೇ ಫೆಬ್ರುವರಿ ಮಾಹೆ 2020 ನೇ ಇಸವಿಃ

**ಮೂಲ ದಾವಾ ಸಂಖ್ಯೆ ಃ 107/2018**

ವಾದಿಃಗಳು ಃ ಭಾಗ್ಯ ಕೋಂ ವಿಶ್ವನಾಥ, 48 ವರ್ಷ ವಯಸ್ಸು,
ಗೇಕರವಳ್ಳಿ ದಾಖಲೆ, ಹುಲ್ಲಹಳ್ಳಿ, ಕಸಬಾ ಹೋಬಳಿ,
ಆಲೂರು ತಾಲ್ಲೂಕು, ಹಾಸನ ಜಿಲ್ಲೆ.

(ಶ್ರೀ ಕೆ.ಎಸ್. ಪಂಚಾಕ್ಷರಿ, ವಕೀಲರು ಪ್ರತಿನಿಧಿಸುತ್ತಾರೆ)

- ವಿರುದ್ಧ -

ಪ್ರತಿವಾದಿಃಗಳು ಃ

1. ಜಯಮ್ಮ ಕೋಂ ಬಸವೇಗೌಡ,
   60 ವರ್ಷ ವಯಸ್ಸು,
2. ಲಿಂಗರಾಜು ಬಿನ್ ತಮ್ಮೇಗೌಡ,
   58 ವರ್ಷ ವಯಸ್ಸು,

1 ಮತ್ತು 2ನೇ ಪ್ರತಿವಾದಿಯರ ವಾಸಃ
ಹೊಸೂರು ಗ್ರಾಮ, ಕಸಬಾ ಹೋಬಳಿ,
ಆಲೂರು ತಾಲ್ಲೂಕು.

3. ಶಾಂತವೀರೇಗೌಡ ಬಿನ್ ಚನ್ನಬಸವೇಗೌಡ,
   80 ವರ್ಷ ವಯಸ್ಸು,
4. ಬಸವರಾಜು ಬಿನ್ ಶಾಂತವೀರೇಗೌಡ,
   55 ವರ್ಷ ವಯಸ್ಸು,
5. ಜಯಮ್ಮ ಕೋಂ ಸಿದ್ಧರಾಜು,
   45 ವರ್ಷ ವಯಸ್ಸು,
6. ಸಿದ್ದರಾಜು ಬಿನ್ ನಂಜಪ್ಪ,
   50 ವರ್ಷ ವಯಸ್ಸು,

3 ರಿಂದ 6ನೇ ಪ್ರತಿವಾದಿಯರ ವಾಸಃ
ವಡ್ಡರಹಳ್ಳಿ ಗ್ರಾಮ, ಹಳೇಬೀಡು ಹೋಬಳಿ,
ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ.

7. ರಾಮೇಗೌಡ ಬಿನ್ ಬನ್ನಬಸವೇಗೌಡ,
   75 ವರ್ಷ ವಯಸ್ಸು,
8. ತೀರ್ಥೇಶ ಬಿನ್ ರಾಮೇಗೌಡ,
   46 ವರ್ಷ ವಯಸ್ಸು,
9. ನಾಗರಾಜು ಬಿನ್ ರಾಮೇಗೌಡ,
   40 ವರ್ಷ ವಯಸ್ಸು,

7 ರಿಂದ 9ನೇ ಪ್ರತಿವಾದಿಯರ ವಾಸಃ
ಗೇಕರವಳ್ಳಿ ದಾಖ್ಲೆ, ಹುಲ್ಲಹಳ್ಳಿ, ಕಸಬಾ ಹೋಬಳಿ,
ಆಲೂರು ತಾಲ್ಲೂಕು, ಹಾಸನ ಜಿಲ್ಲೆ.

10. ಮಲ್ಲೇಶ ಬಿನ್ ಸಿದ್ದಪ್ಪ,
55 ವರ್ಷ ವಯಸ್ಸು, ಕೂಡಿಗೆಹಳ್ಳಿ, ಪಾಳ್ಯ
ಹೋಬಳಿ, ಆಲೂರು ತಾಲ್ಲೂಕು, ಹಾಸನ ಜಿಲ್ಲೆ.
11. ಚಂದ್ರಶೇಖರ ಬಿನ್ ಸಿದ್ದಪ್ಪ,
50 ವರ್ಷ ವಯಸ್ಸು, ಗೇಕರವಳ್ಳಿ ದಾಖಲೆ
ಹುಲ್ಲಹಳ್ಳಿ, ಕಸಬಾ ಹೋಬಳಿ, ಆಲೂರು
ತಾಲ್ಲೂಕು, ಹಾಸನ ಜಿಲ್ಲೆ.
12. ಶಾಂತಕುಮಾರ ಬಿನ್ ಸಿದ್ದಪ್ಪ, 46 ವರ್ಷ
ವಯಸ್ಸು, ಕೂಡಿಗೆಹಳ್ಳಿ, ಪಾಳ್ಯ ಹೋಬಳಿ,
ಆಲೂರು ತಾಲ್ಲೂಕು, ಹಾಸನ ಜಿಲ್ಲೆ.
13. ಬಸವರಾಜು ಬಿನ್ ಮಂಜಪ್ಪಶೆಟ್ಟಿ,
62 ವರ್ಷ ವಯಸ್ಸು, ವಡ್ಡರಹಳ್ಳಿ ಗ್ರಾಮ,
ಹಳೇಬೀಡು ಹೋಬಳಿ, ಬೇಲೂರು ತಾಲ್ಲೂಕು,
ಹಾಸನ ಜಿಲ್ಲೆ.

(3 ರಿಂದ 6 ಹಾಗೂ 13ನೇ ಪ್ರತಿವಾದಿಯರು
ಶ್ರೀ ಬಿ.ಎಸ್.ರಾಜಶೇಖರ, ವಕೀಲರ ಮೂಲಕ
ಪ್ರತಿನಿಧಿಸುತ್ತಾರೆ. 1, 2, 7, 9 ರಿಂದ 12
ಪ್ರತಿವಾದಿಯರು ಏಕಪಕ್ಷೀಯ.
8ನೇ ಪ್ರತಿವಾದಿ ಅವೈಟ್ ಎಸ್ಎಸ್,)

ಃಮಧ್ಯಂತರ ಅರ್ಜಿ 2 ಕ್ಕೆ ಪಕ್ಷಕಾರರುಃ

ಅರ್ಜಿದಾರರು ಃ ಭಾಗ್ಯ

ವಿರುದ್ಧ

ಎದುರುದಾರರು ಃ ಜಯಮ್ಮ ಮತ್ತು ಇತರರು

*****

ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2ರ ಮಧ್ಯಕಾಲೀನ ಅರ್ಜಿ ಸಂಖ್ಯೆಃ 2 ರ ಮೇಲಿನ ಆದೇಶಃ

ವಾದಿಯು, ಪ್ರತಿವಾದಿಯರ ವಿರುದ್ಧ ಮಧ್ಯಂತರ ಅರ್ಜಿ ಸಂ.2 ನ್ನು ಸಲ್ಲಿಸಿ, ದಾವೆ ತೀರ್ಮಾನವಾಗುವವರೆಗೆ 3 ರಿಂದ 6 ಹಾಗೂ 13ನೇ ಪ್ರತಿವಾದಿಯರಾಗಲೀ, ಅವರ ಕಡೆಯವರಾಗಲೀ ದಾವಾ ಆಸ್ತಿಗಳನ್ನು ಯಾವುದೇ ರೀತಿಯಲ್ಲೂ ಪರಭಾರೆ, ಕ್ರಯ, ಕ್ರಯದ ಕರಾರು, ಭೋಗ್ಯ, ಅಡಮಾನ, ಖಾತೆ ಇನ್ನಿತರೆ ಮಾಡದಂತೆ ಹಾಗೂ ಕೆಲವು ದಾವಾ ಆಸ್ತಿಗಳನ್ನು ಸರ್ಕಾರವು ವಶಪಡಿಸಿಕೊಂಡು ಪರಿಹಾರ ನೀಡುತ್ತಿದ್ದು, ಸದರಿ ಪರಿಹಾರವನ್ನು ಪಡೆಯದಂತೆ 3

ರಿಂದ 6ನೇ ಮತ್ತು 13ನೇ ಪ್ರತಿವಾದಿಯರ ವಿರುದ್ಧ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಆದೇಶದ ಮೂಲಕ ನಿರ್ಬಂಧಿಸಬೇಕಾಗಿ ಪ್ರಾರ್ಥಿಸಿರುತ್ತಾರೆ.

2. ವಾದಿಯು : ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಮತ್ತು ವಾದ ಪತ್ರದಲ್ಲಿ ಹೇಳುವುದೇನೆಂದರೆ, ಚನ್ನಬಸವೇಗೌಡ ಮತ್ತು ಬಸಮ್ಮ ದಂಪತಿಗಳಿಗೆ ಒಟ್ಟು 4 ಜನ ಮಕ್ಕಳಿದ್ದು, ಅವರಲ್ಲಿ ಇಬ್ಬರು ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳಿದ್ದು, ಅವರು ಕ್ರಮವಾಗಿ 1 ಮತ್ತು 2ನೇ ಪ್ರತಿವಾದಿಯರ ತಾಯಿ ಮೃತ ಅಮ್ಮಯ್ಯಮ್ಮ, 3 ಮತ್ತು 7ನೇ ಪ್ರತಿವಾದಿಯರು ಹಾಗೂ 10 ರಿಂದ 12ನೇ ಪ್ರತಿವಾದಿಯರ ತಾಯಿಯವರಾದ ಮೃತ ಸಿದ್ದಮ್ಮ ರವರಾಗಿರುತ್ತಾರೆ. ವಾದಿ ಮತ್ತು 8 ಹಾಗೂ 9ನೇ ಪ್ರತಿವಾದಿಯರು ಸದರಿ ಚನ್ನಬಸವೇಗೌಡರ 3ನೇ ಮಗನಾದ 7ನೇ ಪ್ರತಿವಾದಿಯ ಮಕ್ಕಳಾಗಿರುತ್ತಾರೆ. 4 ಮತ್ತು 5ನೇ ಪ್ರತಿವಾದಿಯರು ಚನ್ನಬಸವೇಗೌಡರ 2ನೇ ಮಗನಾದ 3ನೇ ಪ್ರತಿವಾದಿಯ ಮಕ್ಕಳಾಗಿದ್ದು, 6ನೇ ಪ್ರತಿವಾದಿಯು 3ನೇ ಪ್ರತಿವಾದಿಯ ಮಗಳಾದ 5ನೇ ಪ್ರತಿವಾದಿಯ ಗಂಡನಾಗಿದ್ದು, 4 ರಿಂದ 6ನೇ ಪ್ರತಿವಾದಿಯರು 3ನೇ ಪ್ರತಿವಾದಿಯಿಂದ ದಾವಾ ಆಸ್ತಿಗಳನ್ನು ಕಾನೂನುಬಾಹಿರವಾಗಿ ತಮ್ಮ ಹೆಸರಿಗೆ ದಾನಪತ್ರ ಮತ್ತು ಕ್ರಯಪತ್ರ ಮಾಡಿಸಿಕೊಂಡವರಾದ್ದರಿಂದ ಅವನ್ನು ಸದರಿ ದಾವಾದಲ್ಲಿ ಅವಶ್ಯಕ ಪಾರ್ಟಿಗಳನ್ನಾಗಿ ಮಾಡಲಾಗಿದೆ. ಹಾಗೆಯೇ 13 ಪ್ರತಿವಾದಿಯು ದಾವಾ ಆಸ್ತಿಗಳನ್ನು ಕಾನೂನು ಬಾಹಿರವಾಗಿ ಕ್ರಯಕ್ಕೆ ಪಡೆದವರಾದ್ದರಿಂದ ಅವರನ್ನು ಸದರಿ ದಾವಾದಲ್ಲಿ ಅವಶ್ಯಕ ಪಾರ್ಟಿಗಳನ್ನಾಗಿ ಮಾಡಲಾಗಿದೆ. ದಾವಾ ಆಸ್ತಿಗಳು ಚನ್ನಬಸವೇಗೌಡರ ಒಟ್ಟು ಕುಟುಂಬದ ಆಸ್ತಿಗಳಾಗಿದ್ದು, ಒಟ್ಟು ಕುಟುಂಬದ ಸದಸ್ಯರ ಹಕ್ಕು ಮತ್ತು ಸ್ವಾಧೀನದಲ್ಲಿದ್ದು, ಒಟ್ಟು ಕುಟುಂಬದ ಸದಸ್ಯರಾದ ವಾದಿ, ಪ್ರತಿವಾದಿಯರು ಜಂಟಿ ಹಕ್ಕು ಮತ್ತು ಸ್ವಾಧೀನದಾರರಾಗಿ ಅನುಭವಿಸಿಕೊಂಡು ಬರುತ್ತಿರುತ್ತಾರೆ. 3ನೇ ಪ್ರತಿವಾದಿಯು ಕುಟುಂಬದ ಹಿರಿಯ ಗಂಡು ಮಗನಾಗಿದ್ದು, ಬುದ್ಧಿವಂತ ಹಾಗೂ ವ್ಯವಹಾರ ಜ್ಞಾನವುಳ್ಳವರಾಗಿದ್ದು, ಸದರಿ ಚನ್ನಬಸವೇಗೌಡರು ಮರಣ ಹೊಂದಿದ ನಂತರ ಕುಟುಂಬದ ವ್ಯವಹಾರವನ್ನು ನೋಡಿಕೊಂಡು ಬರುತ್ತಿರುತ್ತಾರೆ.

3. ಹೀಗಿರುವಾಗ ವಾದಿಯು ಮುಂದುವರೆದು ತನ್ನ ವಾದ ಪತ್ರದಲ್ಲಿ ವಾದಿ ಮತ್ತು ಪ್ರತಿವಾದಿಯರಲ್ಲಿ ಹೊಂದಾಣಿಕೆ ಬಾರದ ಕಾರಣ ಈಗ್ಗೆ ಮೂರು ತಿಂಗಳಲ್ಲಿ ವಾದಿಯು ತನ್ನ ಭಾಗದ ಹಿಸ್ಸೆ ಕೊಡುವಂತೆ ಪ್ರತಿವಾದಿಯರನ್ನು ಕೇಳಿದಾಗ ಪ್ರತಿವಾದಿಯರು ಆಗ ಕೊಡುತ್ತೇನೆ, ಈಗ ಕೊಡುತ್ತೇನೆಂದು ಕಾಲಹರಣ ಮಾಡಿ, ವಾದಿಯ ಮಾತಿಗೆ ಯಾವುದೇ ಮನ್ನಣೆ ನೀಡಿರುವುದಿಲ್ಲ, ಇದರಿಂದ ವಾದಿಯು ದಾವಾ ಆಸ್ತಿಗಳಲ್ಲಿ ತನ್ನ ಭಾಗದ ಹಿಸ್ಸೆ ಕೊಡುವಂತೆ ಹಿರಿಯರಿಂದ, ಗ್ರಾಮಸ್ಥರಿಂದ ಪಂಚಾಯಿತಿ ಮಾಡಿ ಹೇಳಿಸಿದರೂ ಯಾವುದೇ ಪ್ರಯೋಜನವಾಗಿರುವುದಿಲ್ಲ, ವಾದಿಯು ಸದರಿ ದಾವಾವನ್ನು ಸಲ್ಲಿಸುವ ಉದ್ದೇಶದಿಂದ ದಾವಾ

ಆಸ್ತಿಗಳಿಗೆ ಸಂಬಂಧಪಟ್ಟ ಪಹಣಿ ಪತ್ರಿಕೆ, ಇತರ ದಾಖಲಾತಿಗಳನ್ನು ಪಡೆಯಲು ಸಂಬಂಧಪಟ್ಟ ಕಚೇರಿಗೆ ಹೋಗಿ ದಾಖಲಾತಿಗಳನ್ನು ಪಡೆದು ನೋಡಲಾಗಿ, 3, 4, 7 ಮತ್ತು 8ನೇ ಪ್ರತಿವಾದಿಯರು ವಾದಿಯ ಹಿಸ್ಸೆ ಹಕ್ಕನ್ನು ವಂಚಿಸುವ ದುರದ್ದೇಶದಿಂದ ಕಾನೂನುಬಾಹಿರವಾಗಿ ಮತ್ತು ರೆವಿನ್ಯೂ ಅಧಿಕಾರಿಗಳನ್ನು ಷರೀಕು ಮಾಡಿಕೊಂಡು ವಾದಿಗೆ ತಿಳಿಯದಂತೆ ಮೋಸದಿಂದ ಒಟ್ಟು ಕುಟುಂಬದ ಪಿತ್ರಾರ್ಜಿತ ಆಸ್ತಿಗಳನ್ನು ತನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತಾರೆ. ನಂತರ 3ನೇ ಪ್ರತಿವಾದಿಯು ಕೆಲವು ಆಸ್ತಿಗಳನ್ನು ತನ್ನ ಮಗಳಾದ 5ನೇ ಪ್ರತಿವಾದಿಗೆ ದಾನಪತ್ರ ಮಾಡಿಸಿ, ನಂತರ ತನ್ನ ಮಗನಾದ 4ನೇ ಪ್ರತಿವಾದಿಯ ಹೆಸರಿಗೆ ಕ್ರಯಪತ್ರ ಮಾಡಿಸಿರುತ್ತಾರೆ. ಅಲ್ಲದೇ ಒಟ್ಟು ಕುಟುಂಬದ ದಾವಾ ಐಟಂ ನಂಃ 8ರ ಆಸ್ತಿಯನ್ನು 3ನೇ ಪ್ರತಿವಾದಿಯು ಹಾಗೂ ಐಟಂ ನಂಃ9ರ ಆಸ್ತಿಯನ್ನು 4ನೇ ಪ್ರತಿವಾದಿಯು ಅವರ ಕುಟುಂಬದ ಅಳಿಯನಾದ 5ನೇ ಪ್ರತಿವಾದಿಯ ಹೆಸರಿಗೆ ಕ್ರಯಪತ್ರ ಮಾಡಿಸಿರುವುದು, ನಂತರ ಸದರಿ ದಾನಃಕ್ರಯಪತ್ರದಂತೆ ಸದರಿಯವರ ಹೆಸರಿಗೆ ಖಾತೆ ಮಾಡಿಸಿರುವುದು ತಿಳಿದುಬಂದಿರುತ್ತದೆ. ಅಲ್ಲದೇ ಒಟ್ಟು ಕುಟುಂಬದ ದಾವಾ ಐಟಂ ನಂಃ 10 ಮತ್ತು 11 ರ ಆಸ್ತಿಗಳನುನ 13ನೇ ಪ್ರತಿವಾದಿಗೆ ಮಾರಾಟ ಮಾಡಿದ ಕ್ರಯಪತ್ರ ಮೂಡಿದ್ದು, ಸದರಿ ಕ್ರಯಪತ್ರದಂತೆ 13ನೇ ಪ್ರತಿವಾದಿಯ ಹೆಸರಿಗೆ ಖಾತೆ ಇರುವುದು ತಿಳಿದುಬಂದಿರುತ್ತದೆ. ಸದರಿ ಖಾತಾ ಬದಲಾವಣೆಗಳು ಹಾಗೂ ಮಾರಾಟದ ಕ್ರಯಪತ್ರಗಳು ಃ ದಾನಪತ್ರಗಳು ವಾದಿಯನ್ನು ಬದ್ಧಪಡಿಸುವುದಿಲ್ಲ.

4. ವಾದಿಯು ಮುಂದುವರೆದು ತನ್ನ ವಾದ ಪತ್ರದಲ್ಲಿ ಹಾಗೂ ಅರ್ಜಿಯಲ್ಲಿ ಹೇಳುವುದೇನೆಂದರೆ, ದಾವಾ ಆಸ್ತಿಗಳ ದಾಖಲಾತಿಗಳು 3 ರಿಂದ 5 ಮತ್ತು 13ನೇ ಪ್ರತಿವಾದಿಗಳ ಹೆಸರಿಗಿದ್ದರೂ ಅವುಗಳೆಲ್ಲವೂ ಸಹ ಒಟ್ಟು ಕುಟುಂಬದ ಜಂಟಿ ಹಕ್ಕು, ಸ್ವಾಧೀನದಲ್ಲಿರುವುದರಿಂದ ಲೇಟ್ ಚನ್ನಬಸವೇಗೌಡರ ಪಿತ್ರಾರ್ಜಿತ ಆಸ್ತಿಗಳಾಗಿರುವುದರಿಂದ ಲೇಟ್ ಚನ್ನಬಸವೇಗೌಡರ 3ನೇ ಮಗನಾದ 7ನೇ ಪ್ರತಿವಾದಿಯ ಮಗಳಾದ ವಾದಿಗೆ ಸದರಿ ಸಮಸ್ತ ದಾವಾ ಆಸ್ತಿಗಳಲ್ಲಿ ಹಿಸ್ಸಾ ಹಕ್ಕು ಇರುತ್ತದೆ. ಪ್ರತಿವಾದಿ 3 ರಿಂದ 6 ಮತ್ತು 13 ಪ್ರತಿವಾದಿಯರು ದಾವಾ ಆಸ್ತಿಗಳಿಗೆ ತಾವೇ ವಾರಸುದಾರರೆಂದು ಸ್ವಯಂ ಘೋಷಣೆ ಮಾಡಿಕೊಂಡು, ದಾವಾ ಆಸ್ತಿಗಳಿಂದ ವಾದಿಯನ್ನು ವಂಚಿಸುವ ದುರುದ್ದೇಶದಿಂದ ಒಟ್ಟು ಕುಟುಂಬದ ದಾವಾ ಆಸ್ತಿಗಳನ್ನು ಮಾರಾಟ ಮಾಡಲು ಹವಣಿಸುತ್ತಿರುತ್ತಾರೆ. ಒಂದು ವೇಳೆ ಸದರಿ ಪ್ರತಿವಾದಿಗಳು ಸದರಿ ಕೃತ್ಯದಲ್ಲಿ ಸಫಲರಾದರೆ ವಾದಿಗೆ ತುಂಬಲಾರದ ಕಷ್ಟ-ನಷ್ಟಗಳುಂಟಾಗುವುದಲ್ಲದೇ, ದುಪ್ಪಟ್ಟು ವ್ಯವಹರಣೆಗೆ ಅವಕಾಶ ಮಾಡಿಕೊಟ್ಟಾಂತಾಗುತ್ತದೆ. ಆದ್ದರಿಂದ ವಾದಿಯು ದಾವಾ ಆಸ್ತಿಗಳಲ್ಲಿ ತನ್ನ ಭಾಗದ ಹಿಸ್ಸಾ ಹಕ್ಕು ಘೋಷಣೆ, ಪ್ರತ್ಯೇಕ ಸ್ವಾಧೀನ ಕೋರಿ ದಾವಾ ಸಲ್ಲಿಸಿದ್ದು, ಸದರಿ ದಾವಾದೊಂದಿಗೆ ಮಧ್ಯಂತರ ಅರ್ಜಿ-2ನ್ನು ಸಲ್ಲಿಸಿ, ದಾವೆ ತೀರ್ಮಾನವಾಗುವವರೆಗೆ 3 ರಿಂದ 6 ಹಾಗೂ 13ನೇ ಪ್ರತಿವಾದಿಯರಾಗಲೀ, ಅವರ ಕಡೆಯವರಾಗಲೀ ದಾವಾ ಆಸ್ತಿಗಳನ್ನು ಯಾವುದೇ ರೀತಿಯಲ್ಲೂ

ಪರಭಾರೆ, ಕ್ರಯ, ಕ್ರಯದ ಕರಾರು, ಭೋಗ್ಯ, ಅಡಮಾನ, ಖಾತೆ ಇನ್ನಿತರೆ ಮಾಡದಂತೆ ಹಾಗೂ ಕೆಲವು ದಾವಾ ಆಸ್ತಿಗಳನ್ನು ಸರ್ಕಾರವು ವಶಪಡಿಸಿಕೊಂಡು ಪರಿಹಾರ ನೀಡುತ್ತಿದ್ದು, ಸದರಿ ಪರಿಹಾರವನ್ನು ಪಡೆಯದಂತೆ 3 ರಿಂದ 6ನೇ ಮತ್ತು 13ನೇ ಪ್ರತಿವಾದಿಯರ ವಿರುದ್ಧ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಆದೇಶದ ಮೂಲಕ ನಿರ್ಬಂಧಿಸಬೇಕಾಗಿ ಪ್ರಾರ್ಥಿಸಿರುತ್ತಾರೆ.

5. ದಾವಾ ಸಲ್ಲಿಸಿದ ಬಳಿಕ ನ್ಯಾಯಾಲಯ ಹೊರಡಿಸಿದ ದಾವಾ ನೋಟೀಸ್ ಮತ್ತು ಸಮನ್ಸ್‌ಗೆ ಪ್ರತಿಯಾಗಿ 3 ರಿಂದ 6 ಹಾಗೂ 13ನೇ ಪ್ರತಿವಾದಿಯರು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. 1, 2 7, 9 ರಿಂದ 12 ಪ್ರತಿವಾದಿಯರು ಏಕಪಕ್ಷೀಯವಾಗಿರುತ್ತಾರೆ. 8ನೇ ಪ್ರತಿವಾದಿ ಅಬೈಟ್ ಎಸ್ಎಸ್ ಆಗಿರುತ್ತದೆ. ಸದರಿ ಲಿಖಿತ ಹೇಳಿಕೆಯನ್ನೇ 3 ರಿಂದ 6 ಹಾಗೂ 13ನೇ ಪ್ರತಿವಾದಿಯರು ವಾದಿಯು ತಂದಿರುವ ಮಧ್ಯಕಾಲೀನ ಅರ್ಜಿ-2ಕ್ಕೆ ಆಕ್ಷೇಪಣೆಯನ್ನಾಗಿ ಅಳವಡಿಸಿಕೊಂಡಿರುತ್ತಾರೆ. 3 ಮತ್ತು 4ನೇ ಪ್ರತಿವಾದಿಯರು ಜಂಟಿಯಾಗಿ ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದು, 3 ಮತ್ತು 4ನೇ ಪ್ರತಿವಾದಿಯ ವಾದ ಪತ್ರದಲ್ಲಿರುವ ವಂಶವೃಕ್ಷವನ್ನು ಒಪ್ಪಿಕೊಂಡಿರುತ್ತಾರೆ. ಸದರಿ ಲಿಖಿತ ಹೇಳಿಕೆಯಲ್ಲಿ ವಾದಿ ಮತ್ತು ಪ್ರತಿವಾದಿಯರು ಒಟ್ಟು ಕುಟುಂಬದ ಸದಸ್ಯರು ಹಾಗೂ ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂಬುದನ್ನು ಅಲ್ಲಗೆಳೆದಿರುತ್ತಾರೆ. ಬಹಳ ವರ್ಷಗಳ ಹಿಂದೆ ಅಂದರೆ 1990-91ನೇ ಸಾಲಿಗಿಂತ ಹಿಂದೆಯೇ ಒಟ್ಟು ಕುಟುಂಬದಲ್ಲಿ ವಿಭಾಗವಾಗಿರುತ್ತದೆ ಮತ್ತು ಒಟ್ಟು ಕುಟುಂಬದ ಸ್ವತ್ತುಗಳು ವಿಭಾಗವಾಗಿರುತ್ತದೆ. ಸದರಿ ಪಾಲು ಪಾರಿಕತ್ತಿನಲ್ಲಿ ಚನ್ನಬಸವೇಗೌಡರ ಮಕ್ಕಳು ಕುಟುಂಬದ ಆಸ್ತಿಗಳಲ್ಲಿ ಪಾಲನ್ನು ತೆಗೆದುಕೊಂಡಿರುತ್ತಾರೆ. ಹಿಸ್ಸೆಯಾಗಿ ತೆಗೆದುಕೊಂಡ ಸ್ವತ್ತುಗಳ ಖಾತೆಯನ್ನು ತಮ್ಮಗಳ ಹೆಸರಿಗೆ ಬದಲಾಯಿಸಿಕೊಂಡು ಸ್ವಾಧೀನಾನುಭವದಲ್ಲಿ ಇರುತ್ತಾರೆ. ವಾದಿಯು 7ನೇ ಪ್ರತಿವಾದಿಯರ ತಂದೆ ಮತ್ತು ಸಹೋದರರಾದ 8 ಮತ್ತು 9ನೇ ಪ್ರತಿವಾದಿಯ ಚಿತಾವಣೆಯಿಂದ ದಾವಾ ಸ್ವತ್ತುಗಳನ್ನು ಲಪಟಾಯಿಸಬೇಕೆಂಬ ದುರುದ್ದೇಶದಿಂದ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಈಗಾಗಲೇ ದಾವಾ ಸ್ವತ್ತುಗಳು ಪಾಲುಪಾರಿಕತ್ತಿನಲ್ಲಿ ಹಿಸ್ಸೆಯಾಗಿರುವುದರಿಂದ ಹಿಸ್ಸೆಯನ್ನು ಕೋರಿ ಸಲ್ಲಿಸಿರುವ ದಾವೆ ಊರ್ಜಿತವಾಗುವುದಿಲ್ಲವೆಂದು ಹೇಳಿರುತ್ತಾರೆ. ಅಲ್ಲದೇ 4 ರಿಂದ 6ನೇ ಪ್ರತಿವಾದಿಯರು 3ನೇ ಪ್ರತಿವಾದಿಯಿಂದ ದಾವಾ ಆಸ್ತಿಗಳನ್ನು ಕಾನೂನು ಬಾಹಿರವಾಗಿ ತಮ್ಮ ಹೆಸರಿಗೆ ದಾನಪತ್ರ ಮತ್ತು ಕ್ರಯಪತ್ರವನ್ನು ಮಾಡಿಸಿಕೊಂಡವರಾದ್ದರಿಂದ ಅವಶ್ಯಕ ಪಾರ್ಟಿಗಳನ್ನಾಗಿ ಮಾಡಲಾಗಿದೆ ಎಂಬ ಅಂಶವನ್ನು ಅಲ್ಲಗೆಳೆದಿರುತ್ತಾರೆ. ಮುಂದುವರೆದು, ಸದರಿ ಕ್ರಯಪತ್ರ ಮತ್ತು ದಾನಪತ್ರ ನೊಂದಾವಣೆಯಾಗಿದ್ದು, ಕಾನೂನುಬದ್ಧವಾಗಿರುತ್ತದೆ. ಮತ್ತು ಸದರಿ ದಾಖಲೆಗಳು ತಮ್ಮ ಹಿಸ್ಸೆಗೆ ಬಂದಂತಹ ಆಸ್ತಿಗಳ ಸಂಬಂಧ 3ನೇ ಪ್ರತಿವಾದಿಯು ಬರೆದುಕೊಟ್ಟಿರುವ ದಾಖಲೆಗಳಾಗಿರುತ್ತದೆ. ಕ್ರಯಪತ್ರವು 3 ಮತ್ತು 4ನೇ ಪ್ರತಿವಾದಿಗಳಿಂದ 5ನೇ ಪ್ರತಿವಾದಿಗೆ ವಡ್ಡರಹಳ್ಳಿ ಗ್ರಾಮದ ಸರ್ವೆ

ನಂಬರ್ಃ 27ಃ3 ರಲ್ಲಿನ 1-33 ಗುಂಟೆ ಜಮೀನು ಅಂದರೆ ದಾವಾ ಅನುಸೂಚಿಯ 7ನೇ ಐಟಂ ಜಮೀನಿಗೆ ಸಂಬಂಧಿಸಿದ್ದು, 3ನೇ ಪ್ರತಿವಾದಿಯು ತನ್ನ ಸ್ವಯಾರ್ಜಿತ ಆಸ್ತಿಯ ಸಂಬಂಧ 4ನೇ ಪ್ರತಿವಾದಿಯ ಜೊತೆಗೆ ಬರೆದುಕೊಟ್ಟಿರುವ ಕ್ರಯಪತ್ರವಾಗಿರುತ್ತದೆ. ಮತ್ತು 3ನೇ ಪ್ರತಿವಾದಿಯು ವಡ್ಡರಹಳ್ಳಿ ಗ್ರಾಮದ ಸರ್ವೆ ನಂಬರ್ಃ 27 ಃ 2 ರಲ್ಲಿನ 3-30 ಗುಂಟೆ ಜಮೀನನ್ನು 5ನೇ ಪ್ರತಿವಾದಿಯ ಹೆಸರಿಗೆ ದಾನವಾಗಿ ಬರೆದಿದ್ದು, ಸದರಿ ದಾನಪತ್ರವು ಸಹ ಕಾನೂನುಬದ್ಧ ದಾಖಲೆಯಾಗಿರುತ್ತದೆ. ಮುಂದುವರೆದು ಅವಿಭಕ್ತ ಕುಟುಂಬದ ಸ್ವತ್ತಗಳು ತುಂಬಾ ಹಿಂದೆಯೇ 1990-91ನೇ ಸಾಲಿಗಿಂತ ಹಿಂದೆಯೇ ವಿಭಾಗವಾಗಿ ಖಾತೆಯಾಗಿರುತ್ತದೆ. ಸದರಿ ಹಿಸ್ಸಾ ಜಮೀನುಗಳನ್ನು 7, 8 ಮತ್ತು 9ನೇ ಪ್ರತಿವಾದಿಗಳು ಖಾತೆ ಬದಲಾವಣೆ ಮಾಡಿಸಿಕೊಂಡು ಸ್ವಾಧೀನಾನುಭವದಲ್ಲಿರುತ್ತಾರೆ. ವಾದಿಗೆ ಸದರಿ ಹಿಸ್ಸೆಯನ್ನು ಕೇಳಲು ಯಾವುದೇ ಹಕ್ಕು ಇರುವುದಿಲ್ಲ, ವಾದಿಯು ಅವರ ತಂದೆಯಾದ 7ನೇ ಪ್ರತಿವಾದಿಯನ್ನು ಕೇಳಬೇಕಾಗಿರುತ್ತದೆ. 3 ಮತ್ತು 4ನೇ ಪ್ರತಿವಾದಿಗಳು ಮುಂದುವರೆದು ವಾದ ಪತ್ರದಲ್ಲಿ ಭಿನ್ನವಿಸಿಕೊಳ್ಳುವುದೇನೆಂದರೆ, ವಾದಿಯ ತಂದೆಯಾದ 7ನೇ ಪ್ರತಿವಾದಿಯ ಮಗ ತೀರ್ಥೇಶ ಅಂದರೆ 8ನೇ ಪ್ರತಿವಾದಿಯು ತನ್ನ ಸಹೋದರ 9ನೇ ಪ್ರತಿವಾದಿಯಾದ ನಾಗರಾಜು ಜೊತೆ ದಾವಾ ಅನುಸೂಚಿ 10 ಮತ್ತು 11ನೇ ಐಟಂ ಜಮೀನುಗಳನ್ನು 13ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ. ಸದರಿ 10 ಮತ್ತು 11ನೇ ಐಟಂ ಜಮೀನುಗಳು ಈಗ 13ನೇ ಪ್ರತಿವಾದಿಯ ಹೆಸರಿಗೆ ಖಾತೆಯಾಗಿದ್ದು, 13ನೇ ಪ್ರತಿವಾದಿಯು ಕಾನೂನುಬದ್ಧ ಸ್ವಾಧೀನ ಹೊಂದಿರುತ್ತಾರೆ. ಆದರೆ ವಾದಿಯು ತನ್ನ ಸಹೋದರರು ಬರೆದುಕೊಟ್ಟ ಕ್ರಯಪತ್ರವನ್ನು ಈ ದಾವಾದಲ್ಲಿ ನಮೂದಿಸಿರುವುದಿಲ್ಲ. 7ನೇ ಪ್ರತಿವಾದಿಯು ತನ್ನ ಪತ್ನಿ ಸಿದ್ದಮ್ಮ ಹಾಗೂ ಮಕ್ಕಳಾದ 8 ಮತ್ತು 9ನೇ ಪ್ರತಿವಾದಿಯ ಜೊತೆ ಸೇರಿ ವಡ್ಡರಹಳ್ಳಿ ಗ್ರಾಮದ ಸರ್ವೆ ನಂಬರ್ಃ 27ಃ2 ರಲ್ಲಿರುವ ಖುಷ್ಕಿ ಜಮೀನನ್ನು ಹಾಗೂ ಅದೇ ಸರ್ವೆ ನಂಬರ್ ನಲ್ಲಿ 3-19 ಗುಂಟೆ ಜಮೀನನ್ನು ಮತ್ತು ಸರ್ವೆ ನಂಬರ್ಃ 27ಃ3 ರಲ್ಲಿ 1-33 ಗುಂಟೆ ಖುಷ್ಕಿ ಜಮೀನನ್ನು ಅಂದರೆ 8ನೇ ಪ್ರತಿವಾದಿಯ ಹೆಸರಿನಲ್ಲಿ ಖಾತೆ ಇದ್ದ ಜಮೀನನ್ನು 3ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ. ದಿನಾಂಕಃ 27-03-2006 ರಂದು ಸದರಿ ಜಮೀನುಗಳನ್ನು 3ನೇ ಪ್ರತಿವಾದಿಯ ಹೆಸರಿಗೆ ಮಾರಾಟ ಮಾಡಿರುತ್ತಾರೆ. ಮತ್ತು ಸದರಿ ಛಾಪಾಕಾಗದದ ಮೇಲೆ ಬರೆದಿರುವ ಕ್ರಯಪತ್ರದಲ್ಲಿ ನಮೂದು ಮಾಡಿರುವಂತೆ ಆಲೂರಿನ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನಲ್ಲಿ ಮಾಡಿರುವ ಒಂದು ಲಕ್ಷಗಳ ಸಾಲವನ್ನು ಮರುಪಾವತಿ ಮಾಡುವ ಉದ್ದೇಶಕ್ಕಾಗಿ ಸದರಿ ಜಮೀನುಗಳನ್ನು 3ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ. ಈ ರೀತಿ ವಾದಿಯ ತಂದೆ ಹಾಗೂ ಸಹೋದರರು ಕುಟುಂಬದ ಸ್ವತ್ತುಗಳಲ್ಲಿ ಹಿಸ್ಸೆಯನ್ನು ತೆಗೆದುಕೊಂಡು, ನಂತರ 3ನೇ ಪ್ರತಿವಾದಿಗೆ ಸದರಿ ಜಮೀನನ್ನು ಮಾರಾಟ ಮಾಡಿರುತ್ತಾರೆ. ಆದರಿಂದ ವಾದಿಯು ಪ್ರತಿವಾದಿಗಳ ವಿರುದ್ಧ ತಂದಿರುವ ದಾವಾವನ್ನು ಹಾಗೂ ಅದರೊಂದಿಗೆ ತಂದಿರುವ ಮಧ್ಯಕಾಲೀನ ಅರ್ಜಿ-2ನ್ನು ವಜಾ ಮಾಡಬೇಕಾಗಿ ಕೋರಿರುತ್ತಾರೆ.

6. ಹೀಗಿರುವಾಗ 5 ಮತ್ತು 6ನೇ ಪ್ರತಿವಾದಿಯರು ಸಹ ಜಂಟಿಯಾಗಿ ಪ್ರತ್ಯೇಕ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. ಸದರಿ ಲಿಖಿತ ಹೇಳಿಕೆಯನ್ನೇ ವಾದಿಯ ಮಧ್ಯಕಾಲೀನ ಅರ್ಜಿ-2ಕ್ಕೆ ತಕರಾರೆಂದು ಅಳವಡಿಸಿಕೊಂಡಿರುತ್ತಾರೆ. ಸದರಿ ಪ್ರತಿವಾದಿಯರು ಸಹ ವಾದಿ ಮತ್ತು ಪ್ರತಿವಾದಿಯರ ಸಂಬಂಧವನ್ನು ಒಪ್ಪಿಕೊಂಡಿರುತ್ತಾರೆ. ಉಳಿದಂತೆ ಅರ್ಜಿಯಲ್ಲಿರುವ ಇತರೆ ಅಂಶಗಳನ್ನು ಅಲ್ಲಗೆಳೆದಿರುತ್ತಾರೆ. ಮುಂದುವರೆದು 5 ಮತ್ತು 6ನೇ ಪ್ರತಿವಾದಿಯರ ಪರ ಮಾಡಿಕೊಟ್ಟಿರುವ ಕ್ರಯಪತ್ರ ಮತ್ತು ದಾನಪತ್ರದ ದಾಖಲೆಗಳು ಕಾನೂನುಬದ್ಧವಾಗಿರುತ್ತದೆ ಎಂದು ಹೇಳುತ್ತಾ, ವಾದಿಯು ಇಲ್ಲಿಯತನಕ ಸದರಿ ದಾಖಲೆಯನ್ನು ಪ್ರಶ್ನಿಸಿ ದಾವಾ ಸಲ್ಲಿಸಿರುವುದಿಲ್ಲವೆಂದು ತಮ್ಮ ನಿಲುವನ್ನು ತೆಗೆದುಕೊಂಡಿರುತ್ತಾರೆ. ಚನ್ನಬಸವೇಗೌಡರವರ ಒಟ್ಟು ಕುಟುಂಬದ ಆಸ್ತಿಗಳು 20 ವರ್ಷಗಳ ಹಿಂದೆ ವಿಭಾಗವಾಗಿದ್ದು, 2ನೇ ಬಾರಿ ಹಿಸ್ಸೆ ಕೇಳಲು ಬರುವುದಿಲ್ಲವೆಂದು ಹೇಳಿರುತ್ತಾರೆ. ಮುಂದುವರೆದು 3 ಮತ್ತು 4ನೇ ಪ್ರತಿವಾದಿಯರು ಕಾನೂನುಬಾಹಿರವಾಗಿ 5 ಮತ್ತು 6ನೇ ಪ್ರತಿವಾದಿಯರಿಗೆ ದಾನಪತ್ರ ಮತ್ತು ಕ್ರಯಪತ್ರವನ್ನು ಬರೆದುಕೊಟ್ಟಿರುವುದಿಲ್ಲ, ದಿನಾಂಕಃ 27-03-2006 ರಂದು 7ನೇ ಪ್ರತಿವಾದಿಯು ತನ್ನ ಪತ್ನಿ ಸಿದ್ದಮ್ಮ ಹಾಗೂ ಮಕ್ಕಳಾದ 8 ಮತ್ತು 9ನೇ ಪ್ರತಿವಾದಿಯ ಜೊತೆ ಸೇರಿ ವಡ್ಡರಹಳ್ಳಿ ಗ್ರಾಮದ ಸರ್ವೆ ನಂಬರ್ಃ 27ಃ2 ರಲ್ಲಿರುವ ಖುಷ್ಕಿ ಜಮೀನನ್ನು ಹಾಗೂ ಅದೇ ಸರ್ವೆ ನಂಬರ್ ನಲ್ಲಿ 3-19 ಗುಂಟೆ ಜಮೀನನ್ನು ಮತ್ತು ಸರ್ವೆ ನಂಬರ್ಃ 27ಃ3 ರಲ್ಲಿ 1-33 ಗುಂಟೆ ಖುಷ್ಕಿ ಜಮೀನನ್ನು ಅಂದರೆ 8ನೇ ಪ್ರತಿವಾದಿಯ ಹೆಸರಿನಲ್ಲಿ ಖಾತೆ ಇದ್ದ ಜಮೀನನ್ನು 3ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಸಂಬಂಧ ಛಾಪಾ ಕಾಗದದ ಮೇಲೆ ಸಾಕ್ಷಿಗಳ ಮುಕ್ತ ಕ್ರಯಪತ್ರವನ್ನು ಬರೆದುಕೊಟ್ಟಿರುತ್ತಾರೆ. ಮತ್ತು ಆಲೂರಿನ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನಲ್ಲಿ ಮಾಡಿರುವ ಒಂದು ಲಕ್ಷಗಳ ಸಾಲವನ್ನು ಮರುಪಾವತಿ ಮಾಡುವ ಉದ್ದೇಶಕ್ಕಾಗಿ ಸದರಿ ಜಮೀನುಗಳನ್ನು 3ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ. ಸದರಿ ವಿಷಯವನ್ನು ವಾದ ಪತ್ರದಲ್ಲಿ ನಮೂದಿಸಿರುವುದಿಲ್ಲ, 8ನೇ ಪ್ರತಿವಾದಿಯು ದಾವಾ ಐಟಂ ನಂಬರ್ಃ 10 ಮತ್ತು 11 ರನ್ನು 13ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ. 13ನೇ ಪ್ರತಿವಾದಿಯು ಸದರಿ ಆಸ್ತಿಗಳ ಖಾತೆಯನ್ನು ತನ್ನ ಹೆಸರಿಗೆ ಪಡೆದುಕೊಂಡು ಸ್ವಾಧೀನಾನುಭವದಲ್ಲಿರುತ್ತಾರೆ. ಈ ಎಲ್ಲಾ ಅಂಶಗಳ ಆಧಾರದ ಮೇಲೆ ವಾದಿಯು ಪ್ರತಿವಾದಿಗಳ ವಿರುದ್ಧ ತಂದಿರುವ ದಾವಾವನ್ನು ಹಾಗೂ ಅದರೊಂದಿಗೆ ತಂದಿರುವ ಮಧ್ಯಕಾಲೀನ ಅರ್ಜಿ-2ನ್ನು ವಜಾ ಮಾಡಬೇಕಾಗಿ ಕೋರಿರುತ್ತಾರೆ.

7. ಮುಂದುವರೆದು 13ನೇ ಪ್ರತಿವಾದಿಯು ಸಹ ಪ್ರತ್ಯೇಕವಾಗಿ ಲಿಖಿತ ಹೇಳಿಕೆಯನ್ನು ಸಲ್ಲಿಸಿ, ಸದರಿ ಲಿಖಿತ ಹೇಳಿಕೆಯನ್ನೇ ವಾದಿಯ ಮಧ್ಯಕಾಲೀನ ಅರ್ಜಿ-2ಕ್ಕೆ ತಕರಾರೆಂದು ಅಳವಡಿಸಿಕೊಂಡಿರುತ್ತಾರೆ. ಸದರಿ ಪ್ರತಿವಾದಿಯು ತನ್ನ ಲಿಖಿತ ಹೇಳಿಕೆಯಲ್ಲಿ ವಾದಿ ಮತ್ತು ಇತರೆ ಪ್ರತಿವಾದಿಗಳ ಸಂಬಂಧವು ತನಗೆ ಗೊತ್ತಿರುವುದಿಲ್ಲವೆಂದು ಹೇಳುತ್ತಾ, ಉಳಿದಂತೆ ಅರ್ಜಿಯಲ್ಲಿರುವ ಇತರೆ ಅಂಶಗಳನ್ನು ಅಲ್ಲಗೆಳೆದಿರುತ್ತಾರೆ. 13ನೇ ಪ್ರತಿವಾದಿಯು ದಾವಾ ಆಸ್ತಿಗಳನ್ನು

ಕಾನೂನುಬಾಹಿರವಾಗಿ ಕ್ರಯಕ್ಕೆ ಪಡೆದಿರುವ ಬಗ್ಗೆ ನಮೂದಿಸಿರತ್ತಾರೆ. ಆದರೆ ಇದು ಸುಳ್ಳಾಗಿರುತ್ತದೆ. ದಾವಾ ಆಸ್ತಿ ಐಟಂ ನಂ:10 ಮತ್ತು 11 ರಲ್ಲಿರುವ ಜಮೀನುಗಳನ್ನು 8ನೇ ಪ್ರತಿವಾದಿಯು 13ನೇ ಪ್ರತಿವಾದಿಗೆ ನೊಂದಾಯಿತ ಕ್ರಯಪತ್ರದಡಿಯಲ್ಲಿ ಅಂದರೆ ದಿನಾಂಕ: 15-06-1992 ರಂದು 8ನೇ ಪ್ರತಿವಾದಿಯು 13ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ. ಸದರಿ ದಾವಾ ಆಸ್ತಿಗಳ ಖಾತೆ ಸಹ 13ನೇ ಪ್ರತಿವಾದಿಯ ಹೆಸರಿನಲ್ಲಿದ್ದು, ಪ್ರಸ್ತುತ ಸ್ವಾಧೀನಾನುಭವದಲ್ಲಿರುತ್ತಾರೆ. ಆದ್ದರಿಂದ ವಾದಿಯು ಪ್ರತಿವಾದಿಗಳ ವಿರುದ್ಧ ತಂದಿರುವ ದಾವಾವನ್ನು ಹಾಗೂ ಅದರೊಂದಿಗೆ ತಂದಿರುವ ಮಧ್ಯಕಾಲೀನ ಅರ್ಜಿ-2ನ್ನು ವಜಾ ಮಾಡಬೇಕಾಗಿ ಕೋರಿರುತ್ತಾರೆ.

8. ವಾದವನ್ನು ಆಲಿಸಲಾಯಿತು.

9. ಅರ್ಜಿ ಮತ್ತು ತಕರಾರುಗಳನ್ನು ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದ್ದೇನೆ ಮತ್ತು ಅರ್ಜಿಯ ಇತ್ಯರ್ಥಕ್ಕಾಗಿ ಈ ಕೆಳಗಿನಂತೆ ಅಂಶಗಳನ್ನು ರೂಪಿಸಿರುತ್ತೇನೆ:

1. ವಾದಿಯು, ಪ್ರತಿವಾದಿಯರು ದಾವಾ ಅನುಸೂಚಿ ಆಸ್ತಿಗಳನ್ನು ಬೇರೆಯವರಿಗೆ ಪರಭಾರೆ, ಕ್ರಯ, ಕ್ರಯದ ಕರಾರು, ಭೋಗ್ಯ, ಅಡಮಾನ, ಖಾತೆ ಇನ್ನಿತರೆ ಮಾಡಲು ಪ್ರಯತ್ನಿಸುತ್ತಿರುತ್ತಾರೆಂದು ಮೇಲ್ನೋಟಕ್ಕೆ ರುಜುವಾತುಪಡಿಸುವರೆ?
2. ವಾದಿಯು ಅರ್ಜಿಯಲ್ಲಿ ಕೋರಿರುವಂತೆ ತಮ್ಮ ಪರ ಅನುಕೂಲತೆಯ ಒಲವು ಇದೆ ಎಂಬುದನ್ನು ಸಾಬೀತುಪಡಿಸುವರೆ?
3. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗೆ ತಾತ್ಕಾಲಿಕ ನಿರ್ಬಂಧಕಾಜ್ಞೆ ನೀಡದಿದ್ದರೆ ತುಂಬಲಾರದ ಹಾನಿ ಅಥವಾ ನಷ್ಟ ಉಂಟಾಗುವ ಸಂಭವವಿದೆಯೇ ಎಂಬುದನ್ನು ರುಜುವಾತುಪಡಿಸುವರೆ?
4. ಏನು ಆದೇಶ?

10. ಈ ಪ್ರಕರಣದ ಕಡತ ಮತ್ತು ವಾದಿಯು ಸಲ್ಲಿಸಿದ ಮಧ್ಯಂತರ ಅರ್ಜಿ-2 ಹಾಗೂ ಪ್ರತಿವಾದಿಯರ ತಕರಾರು ಹಾಗೂ ದಾಖಲೆಯನ್ನು ಪರಿಗಣಿಸಿ ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಿರುತ್ತೇನೆ:

| | | | | |
|---|---|---|---|---|
| ಅಂಶ | - | 1 ರಿಂದ 3 | : | ನಕಾರಾತ್ಮಕವಾಗಿ |
| ಅಂಶ | - | 4 | : | ಅಂತಿಮ ಆದೇಶದಂತೆ |

**ಃಕಾರಣಗಳುಃ**

11. ಅಂಶ ಸಂಖ್ಯೆಃ1 ರಿಂದ 3ಃ- ಈ ಮೂರೂ ಅಂಶಗಳು ಒಂದಕ್ಕೊಂದು ಸಂಬಂಧಪಟ್ಟಿರುವುದರಿಂದ ಹಾಗೂ ವಿಷಯಗಳ ಪುನರಾವರ್ತನೆಯನ್ನು ತಪ್ಪಿಸುವ ಉದ್ದೇಶದಿಂದ ಅವುಗಳನ್ನು ಒಟ್ಟಿಗೆ ವಿಮರ್ಶೆಗೆ ತೆಗೆದುಕೊಂಡಿರುತ್ತೇನೆಃ-

12. ವಾದಿಯು ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ಸಲ್ಲಿಸಿ, ದಾವಾ ಆಸ್ತಿಗಳಲ್ಲಿ ವಾದಿಗೆ ಹಿಸ್ಸಾ ಹಕ್ಕು ಇರುತ್ತದೆಂದು ಘೋಷಣೆ ಮಾಡಬೇಕಾಗಿಯೂ ಹಾಗೂ ಸದರಿ ಸ್ವತ್ತುಗಳಲ್ಲಿ 1ಃ4 ಭಾಗದ ಹಿಸ್ಸೆಯನ್ನು ಹಾಗೂ ಪ್ರತ್ಯೇಕ ಸ್ವಾಧೀನವನ್ನು ಕೊಡಿಸಬೇಕಾಗಿ ಹಾಗೂ ದಾವಾ ಆಸ್ತಿಗಳು 3 ರಿಂದ 8 ಹಾಗೂ 13ನೇ ಪ್ರತಿವಾದಿಯ ಹೆಸರಿಗೆ ಆಗಿರುವ ದಾನ ಪತ್ರ ಃ ಕ್ರಯಪತ್ರಗಳು ಹಾಗೂ ಖಾತಾ ಬದಲಾವಣೆಗಳು ಸದರಿ ಆಸ್ತಿಗಳಲ್ಲಿನ ವಾದಿಯ ಹಿಸ್ಸೆಯನ್ನು ಬದ್ಧಪಡಿಸುವುದಿಲ್ಲವೆಂದು ಘೋಷಣೆ ಮಾಡಬೇಕಾಗಿ ಕೋರಿರುತ್ತಾರೆ. ಸದರಿ ದಾವಾದೊಂದಿಗೆ ಮಧ್ಯಂತರ ಅರ್ಜಿ-2ನ್ನು ಸಲ್ಲಿಸಿ, ದಾವೆ ತೀರ್ಮಾನವಾಗುವವರೆಗೆ 3 ರಿಂದ 6 ಹಾಗೂ 13ನೇ ಪ್ರತಿವಾದಿಯರಾಗಲೀ, ಅವರ ಕಡೆಯವರಾಗಲೀ ದಾವಾ ಆಸ್ತಿಗಳನ್ನು ಯಾವುದೇ ರೀತಿಯಲ್ಲೂ ಪರಭಾರೆ, ಕ್ರಯ, ಕ್ರಯದ ಕರಾರು, ಭೋಗ್ಯ, ಅಡಮಾನ, ಖಾತೆ ಇನ್ನಿತರೆ ಮಾಡದಂತೆ ಹಾಗೂ ಕೆಲವು ದಾವಾ ಆಸ್ತಿಗಳನ್ನು ಸರ್ಕಾರವು ವಶಪಡಿಸಿಕೊಂಡು ಪರಿಹಾರ ನೀಡುತ್ತಿದ್ದು, ಸದರಿ ಪರಿಹಾರವನ್ನು ಪಡೆಯದಂತೆ 3 ರಿಂದ 6ನೇ ಮತ್ತು 13ನೇ ಪ್ರತಿವಾದಿಯರ ವಿರುದ್ಧ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಆದೇಶದ ಮೂಲಕ ನಿರ್ಬಂಧಿಸಬೇಕಾಗಿ ಪ್ರಾರ್ಥಿಸಿರುತ್ತಾರೆ.

13. ಮೂಲತಃ ದಾವಾ ಆಸ್ತಿಗಳು ಚನ್ನಬಸವೇಗೌಡ ಮತ್ತು ಬಸಮ್ಮ ದಂಪತಿಗಳಿಗೆ ಸೇರಿದ ಆಸ್ತಿಗಳಾಗಿದ್ದು, ಅವರಿಗೆ ಒಟ್ಟು 4 ಜನ ಮಕ್ಕಳಿದ್ದು, ಅವರಲ್ಲಿ ಇಬ್ಬರು ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳಿದ್ದು, ಅವರು ಕ್ರಮವಾಗಿ 1 ಮತ್ತು 2ನೇ ಪ್ರತಿವಾದಿಯರ ತಾಯಿ ಮೃತ ಅಮ್ಮಯ್ಯಮ್ಮ, 3 ಮತ್ತು 7ನೇ ಪ್ರತಿವಾದಿಯರು ಹಾಗೂ 10 ರಿಂದ 12ನೇ ಪ್ರತಿವಾದಿಯರ ತಾಯಿಯವರಾದ ಮೃತ ಸಿದ್ದಮ್ಮ ರವರಾಗಿರುತ್ತಾರೆ. ವಾದಿ ಮತ್ತು 8 ಹಾಗೂ 9ನೇ ಪ್ರತಿವಾದಿಯರು ಸದರಿ ಚನ್ನಬಸವೇಗೌಡರ 3ನೇ ಮಗನಾದ 7ನೇ ಪ್ರತಿವಾದಿಯ ಮಕ್ಕಳಾಗಿರುತ್ತಾರೆ. 4 ಮತ್ತು 5ನೇ ಪ್ರತಿವಾದಿಯರು ಚನ್ನಬಸವೇಗೌಡರ 2ನೇ ಮಗನಾದ 3ನೇ ಪ್ರತಿವಾದಿಯ ಮಕ್ಕಳಾಗಿದ್ದು, 6ನೇ ಪ್ರತಿವಾದಿಯು 3ನೇ ಪ್ರತಿವಾದಿಯ ಮಗಳಾದ 5ನೇ ಪ್ರತಿವಾದಿಯ ಗಂಡನಾಗಿದ್ದು, 4 ರಿಂದ 6ನೇ ಪ್ರತಿವಾದಿಯರು 3ನೇ ಪ್ರತಿವಾದಿಯಿಂದ ದಾವಾ ಆಸ್ತಿಗಳನ್ನು ಕಾನೂನುಬಾಹಿರವಾಗಿ ತಮ್ಮ ಹೆಸರಿಗೆ ದಾನಪತ್ರ ಮತ್ತು ಕ್ರಯಪತ್ರ ಮಾಡಿಸಿಕೊಂಡವರಾದ್ದರಿಂದ ಅವನ್ನು ಸದರಿ ದಾವಾದಲ್ಲಿ ಅವಶ್ಯಕ ಪಾರ್ಟಿಗಳನ್ನಾಗಿ ಮಾಡಲಾಗಿದೆ. ಹಾಗೆಯೇ 13 ಪ್ರತಿವಾದಿಯು ದಾವಾ ಆಸ್ತಿಗಳನ್ನು ಕಾನೂನು ಬಾಹಿರವಾಗಿ ಕ್ರಯಕ್ಕೆ ಪಡೆದವರಾದ್ದರಿಂದ ಅವರನ್ನು ಸದರಿ ದಾವಾದಲ್ಲಿ ಅವಶ್ಯಕ ಪಾರ್ಟಿಗಳನ್ನಾಗಿ

ಮಾಡಲಾಗಿದೆ. ವಾದಿಯ ಪ್ರಕಾರ ದಾವಾ ಆಸ್ತಿಗಳು ಚನ್ನಬಸವೇಗೌಡರ ಒಟ್ಟು ಕುಟುಂಬದ ಆಸ್ತಿಗಳಾಗಿದ್ದು, ಒಟ್ಟು ಕುಟುಂಬದ ಸದಸ್ಯರ ಹಕ್ಕು ಮತ್ತು ಸ್ವಾಧೀನದಲ್ಲಿದ್ದು, ಒಟ್ಟು ಕುಟುಂಬದ ಸದಸ್ಯರಾದ ವಾದಿ, ಪ್ರತಿವಾದಿಯರು ಜಂಟಿ ಹಕ್ಕು ಮತ್ತು ಸ್ವಾಧೀನದಾರರಾಗಿ ಅನುಭವಿಸಿಕೊಂಡು ಬರುತ್ತಿರುವುದಾಗಿ ತಿಳಿಸಿರುತ್ತಾರೆ. ಮುಂದುವರೆದು 3ನೇ ಪ್ರತಿವಾದಿಯು ಕುಟುಂಬದ ಹಿರಿಯ ಗಂಡು ಮಗನಾಗಿದ್ದು, ಬುದ್ಧಿವಂತ ಹಾಗೂ ವ್ಯವಹಾರ ಜ್ಞಾನವುಳ್ಳವರಾಗಿದ್ದು, ಸದರಿ ಚನ್ನಬಸವೇಗೌಡರು ಮರಣ ಹೊಂದಿದ ನಂತರ ಕುಟುಂಬದ ವ್ಯವಹಾರವನ್ನು ನೋಡಿಕೊಂಡು ಬರುತ್ತಿರುವುದಾಗಿ ತಮ್ಮ ವಾದ ಪತ್ರದಲ್ಲಿ ತಿಳಿಸಿರುತ್ತಾರೆ. ಸದರಿ ಅಂಶವನ್ನು ಪ್ರತಿವಾದಿಯರು ಲಿಖಿತ ಹೇಳಿಕೆಯನ್ನು ಸಲ್ಲಿಸಿ ಸ್ಪಷ್ಟವಾಗಿ ಅಲ್ಲೆಗೆಳೆದಿರುತ್ತಾರೆ.

14. 3 ರಿಂದ 6 ಹಾಗೂ 13ನೇ ಪ್ರತಿವಾದಿಗಳು ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದು, ಸದರಿ ಲಿಖಿತ ಹೇಳಿಕೆಯಲ್ಲಿ ಬಹಳ ವರ್ಷಗಳ ಹಿಂದೆ ಅಂದರೆ 1990-91ನೇ ಸಾಲಿಗಿಂತ ಹಿಂದೆಯೇ ಒಟ್ಟು ಕುಟುಂಬದಲ್ಲಿ ವಿಭಾಗವಾಗಿರುತ್ತದೆ ಮತ್ತು ಒಟ್ಟು ಕುಟುಂಬದ ಸ್ವತ್ತುಗಳು ವಿಭಾಗವಾಗಿರುತ್ತದೆ. ಸದರಿ ಪಾಲು ಪಾರಿಕತ್ತಿನಲ್ಲಿ ಚನ್ನಬಸವೇಗೌಡರ ಮಕ್ಕಳು ಕುಟುಂಬದ ಆಸ್ತಿಗಳಲ್ಲಿ ಪಾಲನ್ನು ತೆಗೆದುಕೊಂಡಿರುತ್ತಾರೆ. ಹಿಸ್ಸೆಯಾಗಿ ತೆಗೆದುಕೊಂಡ ಸ್ವತ್ತುಗಳ ಖಾತೆಯನ್ನು ತಮ್ಮಗಳ ಹೆಸರಿಗೆ ಬದಲಾಯಿಸಿಕೊಂಡು ಸ್ವಾಧೀನಾನುಭವದಲ್ಲಿ ಇರುತ್ತಾರೆ. ವಾದಿಯು 7ನೇ ಪ್ರತಿವಾದಿಯರ ತಂದೆ ಮತ್ತು ಸಹೋದರರಾದ 8 ಮತ್ತು 9ನೇ ಪ್ರತಿವಾದಿಯ ಚಿತಾವಣಿಯಿಂದ ದಾವಾ ಸ್ವತ್ತುಗಳನ್ನು ಲಪಟಾಯಿಸಬೇಕೆಂಬ ದುರುದ್ದೇಶದಿಂದ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂಬ ನಿಲುವನ್ನು ತೆಗೆದುಕೊಂಡಿರುತ್ತಾರೆ. ಸದರಿ ನಿಲುವಿಗೆ ಪೂರಕವಾಗಿ ವಾದಿಯು ಹಾಜರುಪಡಿಸಿರುವ ಮುಟೇಷನ್ 05ಃ90-91ರ ದಾಖಲೆಯನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಚನ್ನಬಸವೇಗೌಡರ ಮಗ ಶಾಂತವೀರೇಗೌಡ, ರಾಮೇಗೌಡ ಹಾಗೂ ಶಾಂತವೀರೇಗೌಡ ರ ಮಗ ಬಸವರಾಜು ಹಾಗೂ ರಾಮೇಗೌಡರ ಮಗ ತೀರ್ಥೇಶರವರು ಒಟ್ಟು ಕುಟುಂಬದ ಆಸ್ತಿಯನ್ನು ವಿಭಾಗ ಮಾಡಿಕೊಂಡ ಬಗ್ಗೆ ಸ್ಪಷ್ಟವಾಗಿ ಸದರಿ ಮ್ಯುಟೇಷನ್ ಪ್ರತಿಯಿಂದ ಕಂಡುಬರುತ್ತದೆ. ಅದೇರೀತಿ ವಾದಿಯು ಹಾಜರುಪಡಿಸಿರುವ ಮ್ಯುಟೇಷನ್ ಪ್ರತಿ ಹಾಗೂ ಪಹಣಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಸದರಿ ವಿಭಾಗದಂತೆ ಮ್ಯುಟೇಷನ್ ಆಧಾರದ ಮೇಲೆ ಅವರವರ ಹೆಸರಿಗೆ ಪಹಣಿ ಸಹ ನಮೂದಾಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಅದೇ ರೀತಿ 4 ರಿಂದ 6ನೇ ಪ್ರತಿವಾದಿಯರು 3ನೇ ಪ್ರತಿವಾದಿಯಿಂದ ದಾವಾ ಆಸ್ತಿಗಳನ್ನು ಕಾನೂನು ಬಾಹಿರವಾಗಿ ತಮ್ಮ ಹೆಸರಿಗೆ ದಾನಪತ್ರ ಮತ್ತು ಕ್ರಯಪತ್ರವನ್ನು ಮಾಡಿಸಿಕೊಂಡಿರುವುದಾಗಿ ಪ್ರತಿವಾದಿಗಳು ತಮ್ಮ ನಿಲುವನ್ನು ತೆಗೆದುಕೊಂಡಿರುತ್ತಾರೆ. ಸದರಿ ನಿಲುವಿಗೆ ಪೂರಕವಾಗಿ 3ನೇ ಪ್ರತಿವಾದಿಯು 4 ಮತ್ತು 5ನೇ ಪ್ರತಿವಾದಿಗೆ ಬರೆದುಕೊಟ್ಟಿರುವ ಕ್ರಯಪತ್ರವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತಾರೆ. ಸದರಿ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, 7, 8 ಮತ್ತು

9ನೇ ಪ್ರತಿವಾದಿಯರ ತಮ್ಮ ಹೆಸರಿಗೆ ಬಂದ ಆಸ್ತಿಗಳನ್ನು ಈಗಾಗಲೇ 3ನೇ ಪ್ರತಿವಾದಿಗೆ ಮಾರಾಟ ಮಾಡಿದ್ದು, 3ನೇ ಪ್ರತಿವಾದಿಯು ತನಗೆ ಬಂದ ಆಸ್ತಿಯನ್ನು 5ನೇ ಪ್ರತಿವಾದಿಗೆ ದಾನ ಪತ್ರದ ಮೂಲಕ ಕೆಲವು ಆಸ್ತಿಗಳನ್ನು ಕೊಟ್ಟಿರುವ ಬಗ್ಗೆ ವಾದಿಯು ಹಾಜರುಪಡಿಸಿರುವ ದಾಖಲೆ ಮೂಲಕ ಸ್ಪಷ್ಟವಾಗಿ ಕಂಡುಬರುತ್ತದೆ. ಅದೇ ರೀತಿ ಸದರಿ ದಾಖಲೆಗಳ ಆಧಾರದ ಮೇಲೆ 4ನೇ ಪ್ರತಿವಾದಿ ಮತ್ತು 6ನೇ ಪ್ರತಿವಾದಿ ತಮ್ಮ ಹೆಸರಿಗೆ ಕ್ರಯಪತ್ರ ಆಗಿರುವ ಬಗ್ಗೆ ಪ್ರತಿವಾದಿಯರು ಹಾಜರುಪಡಿಸಿರುವ ದಾಖಲೆಗಳ ಮೂಲಕ ಸ್ಪಷ್ಟವಾಗಿ ಕಂಡುಬರುತ್ತದೆ. ಈಗಾಗಲೇ ನೊಂದಾಯಿತ ದಾಖಲೆಗಳು 3 ರಿಂದ 6ನೇ ಪ್ರತಿವಾದಿ ಹಾಗೂ 13ನೇ ಪ್ರತಿವಾದಿಯ ಹೆಸರಿನಲ್ಲಿ ಇರುವುದರಿಂದ ಸದರಿ ನೊಂದಾಯಿತ ದಾಖಲೆಗಳಿಗೆ ಹೆಚ್ಚಿನ ಮನ್ನಣೆ ಕೊಡಬೇಕಾಗುತ್ತದೆ ಎಂದು ಮಾನ್ಯ ಉಚ್ಚ ನ್ಯಾಯಾಲಯವು ಮತ್ತು ಮಾನ್ಯ ಸರ್ವೋಚ್ಛ ನ್ಯಾಯಾಲಯವು ಹಲವಾರು ತೀರ್ಪುಗಳಲ್ಲಿ ಉಲ್ಲೇಖಿಸಿರುತ್ತದೆ. ಅದೇ ರೀತಿ 3 ರಿಂದ 6 ಹಾಗೂ 13ನೇ ಪ್ರತಿವಾದಿಯರ ಹೆಸರಿಗೆ ಆಗಿರುವ ಮ್ಯುಟೇಷನ್ ಮತ್ತು ರೆವಿನ್ಯೂ ದಾಖಲೆಗಳನ್ನು ವಾದಿಯು ಸಂಬಂಧಪಟ್ಟ ಪ್ರಾಧಿಕಾರದಲ್ಲಿ ಇಲ್ಲಿಯವರೆಗೂ ಪ್ರಶ್ನಿಸಿರುವುದಿಲ್ಲ. ಒಮ್ಮೆ ನೊಂದಾಯಿತ ಕ್ರಯಪತ್ರ ಆದ ಪಕ್ಷದಲ್ಲಿ, ಸ್ವಾಧೀನ ಸಹ ಕ್ರಯದಾರರ ಬಳಿ ಇರುತ್ತದೆ ಎಂಬ ಬಗ್ಗೆ ಸದರಿ ಕ್ರಯಪತ್ರ ಮತ್ತು ದಾನಪತ್ರದಲ್ಲಿ ಸ್ಪಷ್ಟವಾಗಿ ತೋರಿಸಿರುತ್ತಾರೆ. 7ನೇ ಪ್ರತಿವಾದಿಯು ತನ್ನ ಪತ್ನಿ ಸಿದ್ದಮ್ಮ ಹಾಗೂ ಮಕ್ಕಳಾದ 8 ಮತ್ತು 9ನೇ ಪ್ರತಿವಾದಿಯ ಜೊತೆ ಸೇರಿ ವಡ್ಡರಹಳ್ಳಿ ಗ್ರಾಮದ ಸರ್ವೆ ನಂಬರ್ಃ 27ಃ2 ರಲ್ಲಿರುವ ಖುಷ್ಕಿ ಜಮೀನನ್ನು ಹಾಗೂ ಅದೇ ಸರ್ವೆ ನಂಬರ್ ನಲ್ಲಿ 3-19 ಗುಂಟೆ ಜಮೀನನ್ನು ಮತ್ತು ಸರ್ವೆ ನಂಬರ್ಃ 27ಃ3 ರಲ್ಲಿ 1-33 ಗುಂಟೆ ಖುಷ್ಕಿ ಜಮೀನನ್ನು ಅಂದರೆ 8ನೇ ಪ್ರತಿವಾದಿಯ ಹೆಸರಿನಲ್ಲಿ ಖಾತೆ ಇದ್ದ ಜಮೀನನ್ನು 3ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಬಗ್ಗೆ ಉಭಯ ಪಕ್ಷಗಾರರು ಹಾಜರುಪಡಿಸಿರುವ ಕ್ರಯಪತ್ರದ ಮೂಲಕ ಸ್ಪಷ್ಟವಾಗಿ ಕಂಡುಬರುತ್ತದೆ. ಅದೇ ರೀತಿ ವಾದಿ ತನ್ನ ತಂದೆಗೆ ಬಂದ ಕುಟುಂಬ ಸ್ವತ್ತುಗಳನ್ನು 3ನೇ ಪ್ರತಿವಾದಿ ಸದರಿ ಜಮೀನನ್ನು ಮಾರಾಟ ಮಾಡಿರುವ ಬಗ್ಗೆ ತಮ್ಮ ನಿಲುವನ್ನು ತೆಗೆದುಕೊಂಡಿರುತ್ತಾರೆ. ಸದರಿ ನಿಲುವಿಗೆ ಪೂರಕವಾಗಿ ಈಗಾಗಲೇ 7, 8 ಮತ್ತು 9ನೇ ಪ್ರತಿವಾದಿಯರು ಹಾಗೂ ವಾದಿಯ ತಂದೆ ಮತ್ತು ಇತರೆ ಸಹೋದರರು ಬರೆದುಕೊಟ್ಟಿರುವ ಕ್ರಯಪತ್ರವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತಾರೆ. ಈಗಾಗಲೇ ಹೇಳಿದಂತೆ ಎಂ.ಆರ್ ನಂಃ 5ಃ1990-91 ರಂದು ದಾವಾ ಆಸ್ತಿಗಳನ್ನು ಚನ್ನಬಸವೇಗೌಡರವರ ಮಕ್ಕಳು ವಿಭಾಗ ಮಾಡಿಕೊಂಡು, ತಮ್ಮ ತಮ್ಮ ಹೆಸರಿಗೆ ಬಂದ ಆಸ್ತಿಗಳನ್ನು ಅನುಭವಿಸಿಕೊಂಡು ಬಂದಿದ್ದು, ವಾದಿಯ ತಂದೆ ಮತ್ತು ಇತರೆ ಸಹೋದರರು ತಮ್ಮ ಹಿಸ್ಸೆಗೆ ಬಂದ ಆಸ್ತಿಗಳನ್ನು 3ನೇ ಪ್ರತಿವಾದಿಗೆ ಮಾರಾಟ ಮಾಡಿರುವುದು ಕ್ರಯಪತ್ರದ ಮೂಲಕ ಸ್ಪಷ್ಟವಾಗಿ ಕಂಡುಬರುತ್ತದೆ. ಇದರಿಂದ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಈಗಾಗಲೇ 3 ರಿಂದ 6, 13ನೇ ಪ್ರತಿವಾದಿಯ ಹೆಸರಿಗೆ ಕ್ರಯಪತ್ರ ಮತ್ತು ದಾನಪತ್ರ ಆಗಿರುವುದರಿಂದ ದಾವಾ ಆಸ್ತಿಯು ಒಮ್ಮೆ ವಿಭಾಗ ಆಗಿರುವುದರಿಂದ ವಾದಿಯ ತನ್ನ ತಂದೆಯ ಆಸ್ತಿಯಲ್ಲಿ ಮಾತ್ರ ವಿಭಾಗ

ಕೇಳಬೇಕಾಗಿರುತ್ತದೆ. ತನ್ನ ದೊಡ್ಡಪ್ಪ ಮತ್ತು ಚಿಕ್ಕಪ್ಪನ ಆಸ್ತಿಯಲ್ಲಿ ವಿಭಾಗ ಕೇಳಲು ವಾದಿಗೆ ಅಧಿಕಾರ ಇರುವುದಿಲ್ಲ. ಅಲ್ಲದೇ ಕೆಲವೊಂದು ದಾವಾ ಆಸ್ತಿಗಳನ್ನು ಭೂ ಸ್ವಾಧೀನಾಧಿಕಾರಿಗಳು ಎತ್ತಿನಹೊಳೆ ಕಾಮಗಾರಿಗೆ ಸ್ವಾಧೀನ ಪಡಿಸಿಕೊಂಡಿದ್ದು, ಬೆಳೆಗೆ ಸಂಬಂಧಿಸಿದಂತೆ ಪರಿಹಾರವನ್ನು ನೀಡಿರುವ ಬಗ್ಗೆ ಪ್ರತಿವಾದಿಯು ಹಾಜರುಪಡಿಸಿರುವ ದಾಖಲೆಗಳಿಂದ ಸ್ಪಷ್ಟವಾಗಿ ಕಂಡುಬರುತ್ತದೆ. ಈ ದಾವಾದಲ್ಲಿ ಏಕ ಪಕ್ಷೀಯ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಆದೇಶ ಆದ ಕಾರಣ ಸದರಿ ಭೂ ಸ್ವಾಧೀನಾಧಿಕಾರಿಗಳು ಪ್ರತಿವಾದಿಗಳಿಗೆ ಪರಿಹಾರದ ಹಣವನ್ನು ನೀಡಲು ನಿರಾಕರಿಸಿರುತ್ತಾರೆ. ಇದ್ದರಿಂದ ಈಗಾಗಲೇ ಹೇಳಿದಂತೆ 7ನೇ ಪ್ರತಿವಾದಿ ಮತ್ತು 8 ಮತ್ತು 9ನೇ ಪ್ರತಿವಾದಿಯರು ಅಂದರೆ ವಾದಿಯ ತಂದೆ ಮತ್ತು ಅವರ ಸಹೋದರರು ತಮ್ಮ ಪಾಲಿಗೆ ಬಂದ ಆಸ್ತಿಗಳನ್ನು ಪಡೆದುಕೊಂಡು 3ನೇ ಪ್ರತಿವಾದಿಯರಿಗೆ ಮಾರಾಟ ಮಾಡುವುದು ಕಂಡುಬರುತ್ತದೆ. 3ನೇ ಪ್ರತಿವಾದಿಗೆ ತಮಗೆ ಬಂದ ಆಸ್ತಿಯನ್ನು 5ನೇ ಪ್ರತಿವಾದಿಗೆ ದಾನಪತ್ರದ ಮೂಲಕ ಕೊಟ್ಟಿದ್ದು, ಅದೇರೀತಿ ಸದರಿ 5ನೇ ಪ್ರತಿವಾದಿ ತನಗೆ ಬಂದ ಆಸ್ತಿಯನ್ನು 4 ಮತ್ತು 6ನೇ ಪ್ರತಿವಾದಿಯರಿಗೆ ಕ್ರಯಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ. ಇದರಿಂದ ಈಗಾಗಲೇ ಹೇಳಿದಂತೆ ದಾವಾ ಆಸ್ತಿಗಳಲ್ಲಿ 3 ರಿಂದ 6 ಮತ್ತು 13ನೇ ಪ್ರತಿವಾದಿಯರು ಕ್ರಯಪತ್ರದಂತೆ ಸ್ವಾಧೀನದಲ್ಲಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಮಾನ್ಯ ಉಚ್ಚ ನ್ಯಾಯಾಲಯವು **2018 (4) KCCR 3088** ರಲ್ಲಿ 2018 (4) KCCR 3088 Smt. Kariyamma and Others V/s Nagappa and Another ಪ್ರಕರಣದಲ್ಲಿ ಒಂದು ವೇಳೆ ಜಂಟಿ ಕುಟುಂಬದ ಆಸ್ತಿಗಳನ್ನು ಕರ್ತ ಮಾರಾಟ ಮಾಡದ ಸಂದರ್ಭದಲ್ಲಿ ಇತರೆ ಸದಸ್ಯರು ದಾವಾವನ್ನು ಸಲ್ಲಿಸಿ, ದಾವಾದಲ್ಲಿ ತಮಗೆ ಹಿಸ್ಸೆ ಹಕ್ಕು ಇದೆ ಎಂದು ರುಜುವಾತುಪಡಿಸಬೇಕಾಗಿರುತ್ತದೆ. ಸದರಿ ಮಾರಾಟ ಮಾಡಿರುವ ಜಂಟಿ ಕುಟುಂಬದ ಆಸ್ತಿಗಳು ಶೂನ್ಯಕರಣವಾಗದೇ ಶೂನ್ಯವಾಗುವುದಿಲ್ಲ. ಪಾಲುದಾರಿಕೆ ವಿಭಾಗ ಕೋರಿ ದಾವಾ ಸಲ್ಲಿಸಿರುತ್ತಾರೆ. ದಾವಾ ಇತ್ಯರ್ಥವಾಗುವ ಅಲ್ಲಿಯತನಕ ಕ್ರಯಪತ್ರ ಯಾರ ಹೆಸರಿನಲ್ಲಿ ಇರುತ್ತದೆಯೋ ಅವರ ಹೆಸರಿಗೆ ರಕ್ಷಣೆ ಕೊಡಬಹುದು ಎಂದು ಸ್ಪಷ್ಟವಾಗಿ ಈ ಕೆಳಕಂಡಂತೆ ಸ್ಪಷ್ಟವಾಗಿ ಉಲ್ಲೇಖಿಸಿರುತ್ತಾರೆ.

**2018 (4) KCCR 3088**

KARNATAKA HIGH COURT

Smt. Kariyamma and Others

V/s

Nagappa and Another

A. CIVIL PROCEDURE CODE, 1908- Order 39, Rule 1 and 2 – Temproray injunction- Ingredients to be considered.

   Held: While considering an application for temporary injunction, three ingredients which requires to be considered be in prima facie case,

balance of convenience, irreparable loss and injury that would be caused in the event of refusal of temporary injuction.

B. CIVIL PROCEDURE CODE, 1908- Order 39, Rules 1 and 2- Temporary injunction- Joint family property- Alienation by Kartha for family necessity before institution of suit- Transfree getting khatha changed in his favour- Found to be in possession and enjoyment of property- Assuming that kartha could not sell joint family property, transaction would only be voidable and not void- Hence, remedy of co-pareners is to file suit for partition- Possession of transfrree needs to be protected- Temporary injunction granted by trial Court would unsettle settled possession of transfree- First appellate Court justified in dissolving tmeporary injunction.

15. ಅದೇ ರೀತಿ ಮಾನ್ಯ ಉಚ್ಚ ನ್ಯಾಯಾಲಯ **2019 (2) KCCR 1437** ರಲ್ಲಿ V. Krishna Char and Others V/s Sundara Murthy and Another ಪ್ರಕರಣದಲ್ಲಿ ಈ ಕೆಳಕಂಡಂತೆ ಉಲ್ಲೇಖಿಸಿರುತ್ತಾರೆ.

**2019(2) KCCR 1437**

**V. Krishna Char and Others**

**V/s**

**Sundarm Murthy and Another**

**CIVIL PROCEDURE CODE, 1908- Order 39 Rules 1 and 2 –Temporary injunction- Suit for partition-Plaintiffs seeking temporary injunction restraining defendants from alienating properties in question as they were ancestral- But not supporting their claim by producing any documents- Trial Court declining to grant relief- Justified – More so when protection under Section 52 of Transfer of Property Act is avaiable to plaintiffs.**

ಅದೇ ರೀತಿ ಮುಂದುವರೆದು, ವಾದಿಯು 3 ರಿಂದ 6 ಹಾಗೂ 13ನೇ ಹೆಸರಿಗೆ ಆಗಿರುವ ಕ್ರಯಪತ್ರವನ್ನಾಗಲೀ ಅಥವಾ ದಾನಪತ್ರವನ್ನಾಗಲೀ ಅಥವಾ ರೆವಿನ್ಯೂ ದಾಖಲೆಗಳನ್ನು ವಾದಿಯು ಇಲ್ಲಿಯತನಕ ಪ್ರಶ್ನಿಸಿರುವುದಿಲ್ಲ, ಆದ್ದರಿಂದ ವಾದಿಗೆ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಯಾವುದೇ

ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡಲು ಕಾನೂನಿನಲ್ಲಿ ಅವಕಾಶ ಇರುವುದಿಲ್ಲ. ಸದರಿ ತೀರ್ಪನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಒಂದು ವೇಳೆ ಪ್ರತಿವಾದಿಗಳು ದಾವಾ ಆಸ್ತಿಗಳನ್ನು ಮಾರಾಟ ಮಾಡಿದ್ದೇ ಆದಲ್ಲಿ ಕ್ರಯಕ್ಕೆ ಪಡೆದ ವ್ಯಕ್ತಿಗಳನ್ನು ಪಕ್ಷಗಾರರನ್ನಾಗಿ ಮಾಡಬೇಕಾಗಿರುತ್ತದೆ. ಇದರಿಂದ ಸ್ವತ್ತು ಹಸ್ತಾಂತರ ಅಧಿನಿಯಮ ಕಲಂ 52 ಪ್ರಕಾರ ವಾದಿಯರಿಗೆ ಹಕ್ಕು ಇರುತ್ತದೆ ಎಂದು ಸ್ಪಷ್ಟವಾಗಿ ಉಲ್ಲೇಖಿಸಿರುತ್ತಾರೆ. ಇದರಿಂದ ಮೇಲೆ ಹೇಳಿದ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಸಿದಾಗ, 3 ರಿಂದ 6 ಹಾಗೂ 13ನೇ ಪ್ರತಿವಾದಿಯರು ಈಗಾಗಲೇ ದಾವಾ ಆಸ್ತಿಗಳನ್ನು ಕ್ರಯಕ್ಕೆ ಪಡೆದು, ದಾನಪತ್ರದ ಮೂಲಕ ಪಡೆದು ದಾವಾ ಆಸ್ತಿಗಳಲ್ಲಿ ಸ್ವಾಧೀನ ಇರುವುದಾಗಿ ಮೇಲ್ನೋಟಕ್ಕೆ ತೋರಿಸಲು ಸಫಲರಾಗಿರುತ್ತಾರೆ. ವಾದಿ ಹೇಳಿದಂತೆ ಜಂಟಿ ಕುಟುಂಬದಲ್ಲಿ ದಾವಾ ಆಸ್ತಿಗಳು ಇರುವುದಿಲ್ಲ ಎಂದು ಸ್ಪಷ್ಟವಾಗಿ ಕಂಡುಬರುತ್ತದೆ. ವಾದಿಯು ಹಾಜರುಪಡಿಸಿರುವ ಮ್ಯುಟೇಷನ್‌ನ ಪ್ರಕಾರ ವಾದಿಯ ತಂದೆ ಮತ್ತು ಅವರ ಸಹೋದರಿಗೆ ಅಂದರೆ ವಾದಿಯ ದೊಡ್ಡಪ್ಪ ಮತ್ತು ಚಿಕ್ಕಪ್ಪನವರಿಗೆ ಎಂ.ಆರ್. ನಂಃ 5ಃ90-91 ರಂತೆ ವಿಭಾಗ ಮಾಡಿಕೊಂಡಿದ್ದು, ಅದರಂತೆ ಹಿಸ್ಸೆ ಬಂದ ಆಸ್ತಿಗಳನ್ನು ತಮ್ಮ ಹೆಸರಿಗೆ ಖಾತೆ ಮಾಡಿಕೊಂಡು ವಾದಿಯ ತಂದೆ ಮತ್ತು ಅವರ ಸಹೋದರರು ತಮ್ಮ ಹಿಸ್ಸೆಗೆ ಬಂದು ಆಸ್ತಿಯನ್ನು 3ನೇ ಪ್ರತಿವಾದಿಗೆ ಮಾರಾಟ ಮಾಡಿರುವುದು ವಾದಿಯು ಹಾಜರುಪಡಿಸಿರುವ ಕ್ರಯಪತ್ರದ ಮೂಲಕ ಸ್ಪಷ್ಟವಾಗಿ ಕಂಡುಬರುತ್ತದೆ. ಒಂದು ವೇಳೆ 7ನೇ ಪ್ರತಿವಾದಿ ಹೆಸರಿಗೆ ಹೋಗಿದ್ದೇ ಆದ್ದಲ್ಲಿ ವಾದಿಯು ಅವರ ಆಸ್ತಿಗಳಲ್ಲಿ ಮಾತ್ರ ಹಿಸ್ಸೆ ಕೇಳಬಹುದಾಗಿದೆ. ಇದರಿಂದ ವಾದಿಗೆ ಅವರ ದೊಡ್ಡಪ್ಪ ಮತ್ತು ಚಿಕ್ಕಪ್ಪರವರ ಹಿಸ್ಸೆಗೆ ಬಂದ ಆಸ್ತಿಯಲ್ಲಿ ಹಿಸ್ಸೆ ಕೇಳಲು ಅಧಿಕಾರ ಇರುವುದಿಲ್ಲ. ಇದರಿಂದ ವಾದಿಯು ತನ್ನ ಪರವಾಗಿ ಪ್ರಕರಣ ಇದೆ ಎಂದು ಮತ್ತು ಅನುಕೂಲತೆಯ ಒಲವು ಸಹ ವಾದಿಯ ಪರವಾಗಿ ಇದ ಎಂದು ತೋರಿಸಲು ವಿಫಲರಾಗಿರುತ್ತಾರೆ. ಆದ್ದರಿಂದ ಮಧ್ಯಂತರ ಅರ್ಜಿ-2ನ್ನು ಪುರಸ್ಕರಿಸಿದ್ದಲ್ಲಿ ವಾದಿಗಿಂತ, 3 ರಿಂದ 6 ಹಾಗೂ 13ನೇ ಪ್ರತಿವಾದಿಯರಿಗೆ ಹೆಚ್ಚಿನ ತೊಂದರೆ ಉಂಟಾಗುವ ಸಂಭವ ಇರುತ್ತದೆ. ಈಗಾಗಲೇ ಹೇಳಿದಂತೆ ಎತ್ತಿನಹೊಳೆ ಕಾಮಗಾರಿಗಳಿಗೆ ಭೂ ಸ್ವಾಧೀನಪಡಿಸಿಕೊಂಡ ಬಾಬ್ತು ಬೆಳೆಗೆ ಸಂಬಂಧಿಸಿದಂತೆ 3 ರಿಂದ 6 ಹಾಗೂ 13ನೇ ಪ್ರತಿವಾದಿಯರ ಹೆಸರಿಗೆ ಭೂ ಸ್ವಾಧೀನಾಧಿಕಾರಿಗಳು ಠೇವಣಿ ಇಟ್ಟಿದ್ದು, ಸದರಿ ಹಣವನ್ನು ಪಡೆಯಲು 3 ರಿಂದ 6 ಹಾಗೂ 13ನೇ ಪ್ರತಿವಾದಿಯರಿಗೆ ಅಧಿಕಾರ ಇರುತ್ತದೆ. ಈ ಎಲ್ಲಾ ಕಾರಣಗಳ ಆಧಾರದ ಮೇಲೆ ಈ ಮೂರೂ ಅಂಶಗಳನ್ನು "ನಕಾರಾತ್ಮಕ " ವಾಗಿ ಉತ್ತರಿಸುತ್ತೇನೆ.

ಅಂಶ ಸಂಖ್ಯೆಃ4ಃ-

16. ಈ ಮೇಲ್ಕಂಡ ಅಂಶಗಳಲ್ಲಿನ ಕಾರಣಗಳಿಂದ ಈ ಕೆಳಕಂಡಂತೆ ಅಂತಿಮ ಆದೇಶವನ್ನು ಮಾಡಿರುತ್ತೇನೆಃ

**ಃಆದೇಶಃ**

**ವಾದಿಯು, ಪ್ರತಿವಾದಿಯರ ವಿರುದ್ಧ ಸಲ್ಲಿಸಿದ ಮಧ್ಯಂತರ ಅರ್ಜಿ -2 ನ್ನು ವಜಾಗೊಳಿಸಲಾಗಿದೆ.**

**ಖರ್ಚಿನ ಕುರಿತು ಯಾವುದೇ ಆದೇಶವಿರುವುದಿಲ್ಲ.**

**(ಮೇಲ್ಕಂಡ ಆದೇಶವನ್ನು ಶೀಘ್ರಲಿಪಿಗಾರಳಿಗೆ ಉಕ್ತಲೇಖನವನ್ನು ಕೊಟ್ಟು, ಪರಿಷ್ಕರಿಸಿ, ತಿದ್ದುಪಡಿ ಮಾಡಿ ದಿನಾಂಕಃ 17ನೇ ಫೆಬ್ರುವರಿ 2020 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.)**

**(ನಾಗೇಶ ಪಿ.)**
**ಸಿವಿಲ್ ನ್ಯಾಯಾಧೀಶರು,ಬೇಲೂರು**

**ಮಧ್ಯಂತರ ಅರ್ಜಿ 2 ರ ಆದೇಶದ ಭಾಗವನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತುಃ**

**ಃಆದೇಶಃ**

**ವಾದಿಯು, ಪ್ರತಿವಾದಿಯರ ವಿರುದ್ಧ ಸಲ್ಲಿಸಿದ ಮಧ್ಯಂತರ ಅರ್ಜಿ -2 ನ್ನು ವಜಾಗೊಳಿಸಲಾಗಿದೆ.**

**ಖರ್ಚಿನ ಕುರಿತು ಯಾವುದೇ ಆದೇಶವಿರುವುದಿಲ್ಲ.**

**(ನಾಗೇಶ ಸಿ.)**
**ಸಿವಿಲ್ ನ್ಯಾಯಾಧೀಶರು,ಬೇಲೂರು**